**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| | |
|---|---|
| ಓ.ಎಸ್. ನಂ | **478/2017** |
| ಪಿ.ಡಬ್ಲ್ಯೂ | **01** |
| ದಿನಾಂಕ | **23.12.2021** |

**ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ ಎ.ಎಮ್.ಎಸ್. ವಕೀಲರಿಂದ ಪ್ರತಿವಾದಿ ಪರ.**

ದಾವಾ ಸ್ವತ್ತು ಸರ್ವೆ ನಂ.92 ಹಾಗೂ ಅದರ ಪಕ್ಕದ ಸ್ವತ್ತಾದ ಸರ್ವೆ ನಂ.91 ರ ಮೋಜಿನಿ ನಕ್ಷೆಯನ್ನು ಪರಿಶೀಲಿಸಿರುತ್ತೇನೆ. ನಿಪಿ 83 ಸರ್ವೆ ನಂ.91 ಹಾಗೂ 92 ರ ಮೋಜಿನಿ ನಕ್ಷೆ ಆಗಿರುತ್ತದೆ. ದಾವಾ ಆಸ್ತಿಯ ಉತ್ತರಕ್ಕೆ ಸರ್ವೆ ನಂ.91/2 ರ ಸ್ವತ್ತು ನಮೂದು ಇದೆ. ಸರ್ವೆ ನಂ.91/2 ರ ಸ್ವತ್ತಿನ ನಂತರ ಉತ್ತರ ದಿಕ್ಕಿಗೆ ಬೆಂಗಳೂರು-ಸರ್ಜಾಪುರ ರಸ್ತೆ ಇದೆ ಎಂದರೆ ಸರಿ. ಸರ್ವೆ ನಂ.91/2 ರ ದಕ್ಷಿಣ ದಿಕ್ಕಿಗೆ ದಾವಾ ಸ್ವತ್ತು ಇದೆ ಎಂದರೆ ಸರಿ. ನಿಪಿ 83 ರ ಆರ್.ಆರ್. ಬಲಭಾಗದ ದಾಖಲೆ ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ಅದು ಮೋಸದಿಂದ ಇತ್ತೀಚೆಗೆ ಮಾಡಿಕೊಂಡಿದ್ದಾರೆ ಎಂದು ನುಡಿದಿರುತ್ತಾರೆ. ನಿಪಿ 85 ರಲ್ಲಿ ಸರ್ವೆ ನಂ.91/2 ಕ್ಕೆ ಸಂಬಂಧಿಸಿದಂತೆ ಸುಣ್ಣಕಲ್ಲುತಿಪ್ಪಯ್ಯ ಬಿನ್ ನಂಜುಂಡ ರವರ ಹೆಸರಿನಲ್ಲಿ 3 ಗುಂಟೆ ನಮೂದು ಇದೆ ಎಂದರೆ ಸರಿ. ತಿಗಳಚೌಡದೇನಹಳ್ಳಿಯ ಗ್ರಾಮ ನಕ್ಷೆಯಲ್ಲಿ ಸರ್ವೆ ನಂ.91 ಮುಖ್ಯ ರಸ್ತೆಗೆ ಹೊಂದಿಕೊಂಡಿದೆ, ಆದರೆ ಸರ್ವೆ ನಂ.92 ಮುಖ್ಯ ರಸ್ತೆಗೆ ಹೊಂದಿಕೊಂಡಿಲ್ಲ ಎಂದರೆ ಸರಿಯಲ್ಲ.

ದಿನಾಂಕ 01.10.2006 ರಂದು ನಮ್ಮ ಕುಟುಂಬದ ಸ್ವತ್ತುಗಳ ಸಂಬಂಧವಾಗಿ ನೊಂದಾಯಿತ ದಾನಪತ್ರ ಆಗಿದೆ ಎಂದರೆ ಸರಿ. ನಮ್ಮ ದಾನಪತ್ರಕ್ಕೆ ನಕ್ಷೆಗಳನ್ನು ಸಹಿ ಮಾಡಿ ಲಗತ್ತಿಸಿದ್ದೇವೆ ಎಂದರೆ ಸರಿ. ಸರ್ವೆ ನಂ.92 ರ ಉತ್ತರ ದಿಕ್ಕಿಗೆ ಖಾಲಿ ಜಾಗವನ್ನು ಬಿಟ್ಟು ನಕ್ಷೆ ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಉತ್ತರಕ್ಕೆ ಸರ್ವೆ ನಂ.91/2 ರ 3 ಗುಂಟೆ ಹೊಂದಿಕೊಂಡಿದೆ ಎಂದರೆ ಸರಿಯಲ್ಲ. ಸರ್ವೆ ನಂ.91/2 ನ್ನು 2 ನೇ ಪ್ರತಿವಾದಿಯ ತಾತ 1946 ರಲ್ಲಿ ಕ್ರಯಕ್ಕೆ ಪಡೆದಿರುವ ಬಗ್ಗೆ ಮಾಹಿತಿ ಇರುವುದಿಲ್ಲ. ಪಾಪಯ್ಯ ರವರು ತೀರಿಕೊಂಡ ನಂತರ 1 ನೇ ಪ್ರತಿವಾದಿಗೆ ಸದರಿ ಸ್ವತ್ತು ಬಂದಿದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ವಯಸ್ಸಾಗಿದ್ದರಿಂದ ಸರ್ವೆ ನಂ.91/2 ನ್ನು 2015 ರಲ್ಲಿ 2 ನೇ ಪ್ರತಿವಾದಿಗೆ ದಾನಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.91/2 ರಲ್ಲಿ ಗುಜರಿ ಅಂಗಡಿ,

ಪಂಚರ್ ಅಂಗಡಿ ಹಾಗೂ ಇತರೆ ಸಣ್ಣಪುಟ್ಟ ಅಂಗಡಿಗಳು ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ದಾವಾ ಸ್ವತ್ತಿಗೆ ನಾನು ಪ್ರತಿದಿನ ಹೋಗಿ ಬರುತ್ತೇನೆ. ನನ್ನ ದಾವಾ ಆಸ್ತಿಯ ಉತ್ತರ ದಿಕ್ಕಿಗೆ ಸದರಿ ಅಂಗಡಿಗಳು ಇವೆ ಎಂಬ ಪ್ರಶ್ನೆಗೆ ಸಾಕ್ಷಿಯು ಪುಟ್ ಪಾತ್ ನಲ್ಲಿ ಹಾಕಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

ಸರ್ವೆ ನಂ.91/2 ನ್ನು ಅಳತೆ ಮಾಡಲು ಸರ್ಕಾರದವರು ಅಕ್ಕಪಕ್ಕದ ಜಮೀನಿನವರಿಗೆ ನೋಟಿಸ್ ನೀಡಿದ್ದರು ಎಂದರೆ ಸರಿ. ಸದರಿ ನೋಟಿಸ್ ನ್ನು ನಾನೂ ಸಹ ಪಡೆದಿರುತ್ತೇನೆ. ಸದರಿ ನೋಟಿಸ್ ನ ಅನ್ವಯ ಸರ್ವೆ ಮಾಡಲು ಬಂದಾಗ ನನಗೆ ಆರೋಗ್ಯ ಸರಿ ಇಲ್ಲದ ಕಾರಣ ನಾನು ಹಾಜರು ಇರಲಿಲ್ಲ. ನ್ಯಾಯಾಲಯದಿಂದ ದಾವಾ ಸ್ವತ್ತು ಮತ್ತು ಸರ್ವೆ ನಂ. 91/2 ನ್ನು ಅಳತೆ ಮಾಡಿಸಲು ನನ್ನ ತಕರಾರು ಇರುವುದಿಲ್ಲ. ಉದ್ದೇಶಪೂರ್ವಕವಾಗಿ ಸರ್ವೆ ನಂ.91/2 ನ್ನು ಲಪಟಾಯಿಸಲು ನಾನು ಸರ್ವೆ ಮಾಡುವ ದಿನ ಹಾಜರು ಇರಲಿಲ್ಲ ಮತ್ತು ನನ್ನ ಜನರು ಸ್ವತ್ತಿನ ಒಳಗೆ ಬಂದು ಅಳತೆ ಮಾಡಲು ಬಿಡಲಿಲ್ಲ ಎಂದರೆ ಸರಿಯಲ್ಲ. ಆ ದಿನ ಆದ ಘಟನೆಗಳನ್ನು ಸರ್ವೆಯರ್ ರವರು ತಮ್ಮ ಮೇಲಾಧಿಕಾರಿಗೆ ವರದಿ ನೀಡಿರುವ ಬಗ್ಗೆ ನನಗೆ ತಿಳಿದಿದೆ ಎಂದರೆ ಸರಿಯಲ್ಲ. ನಮ್ಮ ಸ್ವತ್ತಿನ ವಿಸ್ತೀರ್ಣಕ್ಕೆ ಕಲ್ಲು ಕಂಪೌಂಡ ಹಾಕಿಕೊಂಡಿದ್ದೇವೆ ಎಂದರೆ ಸರಿ. 1980 ರಲ್ಲಿ ಆ ರೀತಿ ಕಂಪೌಂಡ ಹಾಕಿರುತ್ತೇವೆ. ಸದರಿ ಕಂಪೌಂಡ ಸುಭದ್ರವಾಗಿ ಇದೆ ಎಂಬ ಪ್ರಶ್ನೆಗೆ ಸಾಕ್ಷಿಯು ಮಣ್ಣಿನಿಂದ ಸಹ ಕಟ್ಟಿದ್ದು, ಮಳೆ ಬಂದಾಗ ಅದು ಬೀಳುತ್ತದೆ ಎಂದು ನುಡಿಯುತ್ತಾರೆ.

ಗುಜರಿ ಅಂಗಡಿ, ಪಂಚರ್ ಅಂಗಡಿ ಹಾಗೂ ಇತರೆ ಸಣ್ಣಪುಟ್ಟ ಅಂಗಡಿಗಳು 2 ನೇ ಪ್ರತಿವಾದಿ ಬಾಡಿಗೆಗೆ ನೀಡಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಸದರಿ ಅಂಗಡಿಗಳಿಗೆ ವಿದ್ಯುತ್ ಸಂಪರ್ಕ ಪಡೆದಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ ರಸ್ತೆ ಇರುವುದಿಲ್ಲ, ಆದರೆ 2 ನೇ ಪ್ರತಿವಾದಿಯ ಸರ್ವೆ ನಂ.91/2 ನ್ನು ಲಪಟಾಯಿಸಲು ಉತ್ತರ ದಿಕ್ಕಿಗೆ ರಸ್ತೆ ಇದೆ ಎಂದು ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚೆಕ್ ಬಂದಿಯ ಮಾಲೀಕರು ನಾನಲ್ಲ ಎಂದರೆ ಸರಿಯಲ್ಲ. ದಾವಾ ಹೂಡಲು ಯಾವುದೇ ವ್ಯಾಜ್ಯ ಕಾರಣ ಇರಲಿಲ್ಲ ಎಂದರೆ ಸರಿಯಲ್ಲ. ದಿನಾಂಕ 23.11.2017 ರಂದು ಕಂಪೌಂಡ ಹಾಳಾಗಿತ್ತು ಹಾಗೂ ಅದನ್ನು ಸರಿಪಡಿಸಲು ಹೋದಾಗ ಪ್ರತಿವಾದಿಗಳು ತಕರಾರು ಮಾಡಿರುತ್ತಾರೆ. ಸದರಿ ಬಿದ್ದುಹೋಗಿದ್ದ ಕಂಪೌಂಡನ್ನು ನಿರ್ಮಾಣ ಮಾಡಿರುತ್ಥೇವೆ. ಸದರಿ ಬಿದ್ದುಹೋದ ಕಂಪೌಂಡನ ಉತ್ತರ ದಿಕ್ಕಿಗೆ ಪ್ರತಿವಾದಿಯ ಬಾಡಿಗೆ ಅಂಗಡಿಗಳು ಇವೆ ಎಂಬ

ಪ್ರಶ್ನೆಗೆ ಸಾಕ್ಷಿಯು ಅದು ಒಂದು ಕಡೆಗೆ ಮಾತ್ರ ಇದೆ ಹಾಗೂ ನಮ್ಮ ಗೇಟಿಗೆ ಇಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ಛಾಯಾಚಿತ್ರಗಳು ಬೆಂಗಳೂರು-ಸರ್ಜಾಪುರ ರಸ್ತೆಗೆ ಹೊಂದಿಕೊಂಡಿರುವ ದಾವಾ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ ಸರ್ವೆ ನಂ.91/2 ಇದ್ದು, ನಾನು ತಿಳಿಸಿದಂತೆ ಬೆಂಗಳೂರು-ಸರ್ಜಾಪುರ ರಸ್ತೆ ಇಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಸರ್ವೆ ನಂ.91/2 ರ ಮಾಲೀಕರು ಮತ್ತು ಸ್ವಾಧೀನದಲ್ಲಿದ್ದು, ಅವರು ಎಂದಿಗೂ ಸರ್ವೆ ನಂ.92 ಕ್ಕೆ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರರಿಗೆ ಓದಿ ಹೇಳಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು, ಆನೇಕಲ್.